K-tech

भारतीय विज्ञान संस्थान
INDIAN INSTITUTE OF SCIENCE

KSCST

ಸೈಸೆಕ್ ಸೈಬರ್ ಸೆಕ್ಯುರಿಟಿ ಕರ್ನಾಟಕ ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecK Cyber Security Karnataka K-Tech CoE for Cyber Security

# ಸೈಬರ್ ವಾರ್ತಿಕ

## ಜನವರಿ 2023 ಸಂಚಿಕೆ

# CYBER VARTIKA

## JANUARY 2023 EDITION

## ಈ ಸಂಚಿಕೆಯಲ್ಲಿ


- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಜಾಗೃತಿ ಇನ್ಫೋಗ್ರಾಫಿಕ್ಸ್
- ಸೈಸೆಕ್ ವರದಿ


## IN THIS ISSUE


- Foreword
- Curated News
- Awareness Infographics
- CySecK updates


ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!
https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

# ಮುನ್ನುಡಿ | FOREWORD



ನಿತೇಶ್ ಸಿನ್ಹಾ
ಸಂಸ್ಥಾಪಕ ಮತ್ತು ಸಿಇಒ, Sacumen

Nitesh Sinha
Founder and CEO, Sacumen

ಸೈಬರ್ ಸುರಕ್ಷತೆ ಎಂಬುದು ಟೈಟಾನಿಕ್ ಸಿಂಡ್ರೋಮ್‌ನಂತೆ ಕೆಲಸ ಮಾಡುತ್ತದೆ. ಅದು ಮುಳುಗದ ಹಡಗಿದ್ದಂತೆ ಮತ್ತು ತಮಗೆ ಯಾವುದೇತೊಂದರೆಯಾಗುವುದಿಲ್ಲ ಎಂದು ಬಹಳಷ್ಟು ಮಂದಿ ಯೋಚಿಸುತ್ತಾರೆ. ಆದರೆ ಅವರು ಮಂಜುಬಂಡೆಗೆ ಎಷ್ಟು ಹತ್ತಿರದಲ್ಲಿದ್ದಾರೆ ಎಂದು ಅವರಿಗೆತಿಳಿದಿರುವುದೇ ಇಲ್ಲ.

ಜಗತ್ತಿನ ಎಲ್ಲ ಸೈಬರ್ ಸುರಕ್ಷತೆ ಉತ್ಪನ್ನಗಳು ಮತ್ತು ಪರಿಹಾರಗಳು ಐದು ಅಂಶಗಳಿಂದ ಮಾಡಲ್ಪಟ್ಟಿರುತ್ತವೆ. ಅವು ಯಾವುವೆಂದರೆ, ಗುರುತು, ಡಿವೈಸ್, ಅಪ್ಲಿಕೇಶನ್, ನೆಟ್‌ವರ್ಕ್ ಮತ್ತು ಡೇಟಾ. ಬಿರುಸಿನ ವೇಗದಲ್ಲಿ ಎಲ್ಲರೂ ಡಿಜಿಟಲ್ ಪರಿಹಾರಗಳನ್ನು ಅಳವಡಿಸಿಕೊಳ್ಳುತ್ತಿರುವಂತೆಯೇ, ಸೈಬರ್ ಸುರಕ್ಷತೆಯಲ್ಲಿ ಬಹಳ ತೊಡಕಿನ ಸವಾಲುಗಳು ಹುಟ್ಟಿಕೊಳ್ಳುತ್ತಿರುವುದನ್ನು ಕಾಣಬಹುದು. ಈ ಸವಾಲುಗಳು ಹಲವು ಬಾರಿ ತಂತ್ರಜ್ಞಾನದರಕ್ಷಾಕವಚಗಳಿಗೆ ಸೋಲುಣಿಸಬಹುದು. ಆದರೂ ಕೂಡ, ಸೈಬರ್ ಸುರಕ್ಷತೆ ಸರಪಳಿಯಲ್ಲಿ ತುಂಬ ದುರ್ಬಲವಾದ ಅಂಶ ಎಂದರೆ ಮಾನವರು. ಇದುಅಚ್ಚರಿಯ ವಿಷಯವೆನಿಸಬಹುದು, ಆದರೆ ಸರಿಯಾದ ಸೈಬರ್ ಸುರಕ್ಷತೆ ತಿಳಿವಿನಿಂದ ಬಹಳಷ್ಟು ಸೈಬರ್ ಸುರಕ್ಷತೆ ದಾಳಿಗಳನ್ನು ತಗ್ಗಿಸಬಹುದು.

ಸೈಬರ್ ವಾರ್ತಿಕಾದ ಈ ಸಂಚಿಕೆಯು, ಇತ್ತೀಚಿನ ಹಲವಾರು ಸೈಬರ್ ಸುರಕ್ಷತೆ ದಾಳಿಗಳು ಮತ್ತು ಅವು ಹೇಗೆ ನಡೆದವು ಎಂಬುದರ ಬಗೆಗಿನವಿವರಗಳನ್ನು ಹಂಚಿಕೊಳ್ಳುತ್ತದೆ. ಹೆಚ್ಚಿನ ಸೈಬರ್ ಸುರಕ್ಷತೆ ದಾಳಿಗಳು ಹೇಗೆ ದುರಾಸೆ ಮತ್ತು ತಿಳಿವಿನ ಕೊರತೆಯನ್ನು ಬಳಸಿಬೇಟೆಯಾಡುತ್ತವೆ ಎಂದು ಇದರಿಂದ ನಿಮಗೆ ಅರಿವಾಗುತ್ತದೆ.

ದೇಶದ ಸೈಬರ್ ಸುರಕ್ಷತೆ ಚೊಕ್ಕತನವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಸೈಬರ್ ವಾರ್ತಿಕಾ ಪ್ರಮುಖವಾದ ಪಾತ್ರವನ್ನು ನಿಭಾಯಿಸುತ್ತಿದೆ. ಈಸಂಚಿಕೆಯು ಇನ್ನಷ್ಟು ಸೈಬರ್ ಸುರಕ್ಷತೆ ವೀರರನ್ನು ಹುಟ್ಟುಹಾಕುವಲ್ಲಿ ದೊಡ್ಡ ಕೊಡುಗೆ ನೀಡಲಿ ಎಂದು ನಾನು ಹಾರೈಸುತ್ತೇನೆ.

Cyber security operates with Titanic syndrome. Most consider it unsinkable and won't affect them. But they don't realize how close they are to the Iceberg!

All Cyber security products and solutions in the world are built around five entities, i.e., Identity, Devices, Applications, Networks, and Data. With exponential growth in digital adoption, we have seen complex Cyber security challenges evolve. These challenges can beat the technological shields on multiple occasions. But still, the weakest link in the Cyber security chain is the Human element. It may come as a surprise, but most of the Cyber security attacks can be mitigated with the right Cyber security awareness.

This edition of Cyber Vartika shares details of the various Cyber security attacks that have happened in recent times and the modus operandi. This will give you a perspective on how most cyber security attacks prey on Greed and lack of awareness.

Cyber Vatika is playing an important role in improving the Cyber security hygiene of the country. I hope this edition plays an important role in creating more Cyber security warriors.

# ಪ್ರಮುಖ ಸೈಬರ್ ಸುದ್ದಿ

## MEA ಇ-ಮೇಲ್ ಸರ್ವರ್‌ಗೆ ಕನ್ನ; ಇಂಟರ್‌ನೆಟ್‌ನಲ್ಲಿ ಸೂಕ್ಷ್ಮ ಮಾಹಿತಿ ಸೋರಿಕೆ

ಭಾರತದ ವಿದೇಶಾಂಗ ಸಚಿವಾಲಯ ತನ್ನ ಇ-ಮೇಲ್ ಸರ್ವರ್ ಮೇಲೆ ಪ್ರಮುಖ ಸೈಬರ್ ದಾಳಿ ಆಗಿರುವುದರ ಬಗ್ಗೆ ವರದಿ ಮಾಡಿದೆ. ಇದು ಭಾರತದಲ್ಲಿ ನಡೆದ ಬಹು ದೊಡ್ಡ ಸೈಬರ್ ದಾಳಿಗಳಲ್ಲಿ ಒಂದಾಗಿದೆ. ಸಚಿವಾಲಯದ ಗುಟ್ಟಾದ ಮಾಹಿತಿ ಮತ್ತು ಅಧಿಕೃತ ಮಾತುಕತೆಗಳನ್ನು ಮಿಂಗಳ್ಳರು ತಮ್ಮ ಕೈವಶ ಮಾಡಿಕೊಂಡಿದ್ದಾರೆ. ಸಚಿವಾಲಯದ ಕನಿಷ್ಠ 15 ಹಿರಿಯ ಅಧಿಕಾರಿಗಳ ಇಮೇಲ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಇಂಟರ್‌ನೆಟ್‌ನಲ್ಲಿ ಹರಿಬಿಡಲಾಗಿದೆ.

**ವಿದೇಶಾಂಗ ಸಚಿವಾಲಯದ ಹೆಸರಿನಲ್ಲಿ ಬರುವ ಅನುಮಾನಾಸ್ಪದ ಇಮೇಲ್ ಇಲ್ಲವೇ ಸಂದೇಶಗಳ ಬಗ್ಗೆ ಬಳಕೆದಾರರು ಎಚ್ಚರಿಕೆಯಿಂದಿರಬೇಕು ಮತ್ತು ಇಂತಹ ಸಂದರ್ಭಗಳು ಎದುರಾದರೆ, ಅಧಿಕಾರಿಗಳಿಗೆ ತಿಳಿಸಬೇಕೆಂದು CySecK ಸಲಹೆ ನೀಡುತ್ತದೆ.**

## ಮೇಲ್‌ಚಿಂಪ್ ಕಂಪನಿ ಮೇಲೆ ಸೋಶಿಯಲ್ ಇಂಜಿನಿಯರಿಂಗ್ ದಾಳಿ; ಬಳಕೆದಾರರ ಡೇಟಾ ಸೋರಿಕೆ

ಸಾಮೂಹಿಕ ಇಮೇಲ್ ಇಮೇಲ್ ಮತ್ತು ಮಾರ್ಕೆಟಿಂಗ್ ಆಟೊಮೇಶನ್‌ಗೆ ಅವಕಾಶ ಮಾಡಿಕೊಡುವ ಮೇಲ್‌ಚಿಂಪ್ ಎಂಬ ಕಂಪನಿಯಲ್ಲಿ ಡೇಟಾಕಳ್ಳತನವಾಗಿದೆ ಎಂದು ಜನವರಿ 11 ರಂದು ಕಂಪನಿಯು ಹೇಳಿಕೆ ನೀಡಿದೆ. ಸೋಶಿಯಲ್ ಇಂಜಿನಿಯರಿಂಗ್ ಮೂಲಕ 133 ಖಾತೆಗಳ ಬಳಕೆದಾರರಿಗೆಮರುಳುಮಾಡಿದ ಮಿಂಗಳ್ಳರು ಡೇಟಾ ಕಳ್ಳತನ ಮಾಡಿದ್ದಾರೆ. ಇದರಿಂದಾಗಿ ಬಳಕೆದಾರರ ಡೇಟಾ ಸೋರಿಕೆಯಾಗಿದೆ ಎಂದು ಕಂಪನಿ ಹೇಳಿದರೂ,ಯಾವ ಬಗೆಯ ಡೇಟಾ ಎಂದು ಅದು ಸ್ಪಷ್ಟಪಡಿಸಿಲ್ಲ.

**ಮೇಲ್‌ಚಿಂಪ್‌ನ ಬಳಕೆದಾರರು ತಮ್ಮ ಖಾತೆಗಳ ಮೇಲೊಂದು ಕಣ್ಣಿಡಬೇಕು ಮತ್ತು ಸಂದೇಹ ಬರಿಸುವ ಚಟುವಟಿಕೆಗಳು ಕಂಡುಬಂದಲ್ಲಿ, ಅದರಬಗ್ಗೆ ವರದಿಮಾಡಬೇಕೆಂದು CySecK ಸಲಹೆ ನೀಡುತ್ತದೆ.**



## ಎಚ್‌ಆರ್ ಪೋರ್ಟಲ್ MYROCKET.CO ನಲ್ಲಿ ಡೇಟಾ ಕಳ್ಳತನ; ಲಕ್ಷಾಂತರ ಭಾರತೀಯ ಕೆಲಸಗಾರರ ವೈಯಕ್ತಿಕ ಡೇಟಾ ಸೋರಿಕೆ

myrocket.co ಎಂಬ ಎಚ್‌ಆರ್ ನಿರ್ವಹಣೆ ಕಂಪನಿಯಲ್ಲಿ 260 ಜಿಬಿಯಷ್ಟು ದೊಡ್ಡ ಮಟ್ಟದ ಡೇಟಾ ಕಳ್ಳತನವಾಗಿದೆ. ಇದರಿಂದಾಗಿ ಲಕ್ಷಾಂತರ ಭಾರತೀಯ ಕೆಲಸಗಾರರ ಮತ್ತು ಕೆಲಸ ಹುಡುಕುತ್ತಿರುವವರ ವೈಯಕ್ತಿಕ ಮಾಹಿತಿ ಬಯಲಾಗಿದೆ. ಬಯಲಾದ ಮಾಹಿತಿಯು ಹೆಸರು, ಫೋನ್ ನಂಬರ್, ಇಮೇಲ್ ವಿಳಾಸ, ರೆಸ್ಯೂಮೆ, ಸಂಬಳದ ಚೀಟಿ, ತೆರಿಗೆ ಸಲ್ಲಿಕೆ, ವಿಮೆ ಪಾವತಿ ಮತ್ತು ಸಂಬಳದ ಶೀಟ್‌ಗಳನ್ನು ಸಾಮೂಹಿಕ ಇಮೇಲ್.

**myrocket.co ನ ಬಳಕೆದಾರರು ತಮ್ಮ ಪಾಸ್‌ವರ್ಡ್‌ಗಳನ್ನು ಕೂಡಲೇ ಬದಲಾಯಿಸಬೇಕು ಮತ್ತು ಬಲೆಬೀಸುವ ಇಮೇಲ್‌ಗಳ ಬಗ್ಗೆ ಎಚ್ಚರದಿಂದಿರಬೇಕು ಎಂದು CySecK ಸಲಹೆ ನೀಡುತ್ತದೆ.**



## ಸುಳ್ಳು ಸುದ್ದಿ ಹರಡಿದ 6 ಯೂಟ್ಯೂಬ್ ಚಾನೆಲ್‌ಗಳನ್ನು ತಡೆಹಿಡಿದ ಸರ್ಕಾರ

ಸುಳ್ಳು ಸುದ್ದಿ ಹರಡಿದ ಆರೋಪವಿರುವ 6 ಯೂಟ್ಯೂಬ್ ಚಾನೆಲ್‌ಗಳ ವಿರುದ್ಧ ಭಾರತ ಸರ್ಕಾರ ಕ್ರಮ ಕೈಗೊಂಡಿದೆ. ಪ್ರೆಸ್ ಮಾಹಿತಿ ಬ್ಯೂರೊಹೇಳಿಕೆಯ ಪ್ರಕಾರ, ಈ ಚಾನೆಲ್‌ಗಳು ಚುನಾವಣೆ, ಸುಪ್ರೀಮ್ ಕೋರ್ಟ್ ಮತ್ತು ಸಂಸತ್ತಿನ ಕಲಾಪಗಳು ಹಾಗೂ ಸರ್ಕಾರದ ಕಾರ್ಯನಿರ್ವಹಣೆ ಬಗ್ಗೆಸುಳ್ಳು ಮಾಹಿತಿ ಹಂಚಿಕೊಳ್ಳುತ್ತಿದ್ದವು. ನಾಗರಿಕರಿಗೆ ಸರಿಯಾದ ಮಾಹಿತಿಯೊದಗಬೇಕು ಮತ್ತು ಸುಳ್ಳು ಮಾಹಿತಿಯ ಹಾವಳಿಯನ್ನು ತಡೆಯಬೇಕುಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಇಲ್ಲದಿದ್ದರೆ ಸಮಾಜದಲ್ಲಿ ದಿಗಿಲು ಮತ್ತು ಗೊಂದಲ ಉಂಟಾಗಬಹುದೆಂದು ಸ್ಪಷ್ಟಪಡಿಸಿದೆ.

**ಇಂಟರ್‌ನೆಟ್ ಬಳಕೆದಾರರು ಪರಿಶೀಲನೆಯಾದ ಖಾತೆಗಳ ವಿಷಯಗಳನ್ನು ಮಾತ್ರ ಓದಬೇಕು ಮತ್ತು ಮಾಹಿತಿಯ ಮೂಲವನ್ನು ಪರಿಶೀಲಿಸದೆಅದನ್ನು ಹಂಚಬಾರದು ಇಲ್ಲವೇ ಫಾರ್ವರ್ಡ್ ಮಾಡಬಾರದು ಎಂದು CySecK ಸಲಹೆ ನೀಡುತ್ತದೆ.**

## ಟ್ವಿಟರ್ ಡೇಟಾ ಕಳ್ಳತನ; 20 ಕೋಟಿ ಬಳಕೆದಾರರ ಇಮೇಲ್ ವಿಳಾಸ ಸೋರಿಕೆ

ಸಂಶೋಧಕರೊಬ್ಬರ ಪ್ರಕಾರ, ಟ್ವಿಟರ್‌ನಲ್ಲಿ ದೊಡ್ಡ ಮಟ್ಟದ ಡೇಟಾ ಕಳ್ಳತನವಾಗಿದ್ದು, 20 ಕೋಟಿ ಬಳಕೆದಾರರ ಇಮೇಲ್ ವಿಳಾಸಗಳುಸೋರಿಕೆಯಾಗಿವೆ.

**ಟ್ವಿಟರ್ ಬಳಕೆದಾರರು ತಮ್ಮ ಪಾಸ್‌ವರ್ಡ್‌ಗಳನ್ನು ಬದಲಾಯಿಸಬೇಕು ಮತ್ತು ಹೆಚ್ಚಿನ ಭದ್ರತೆಗಾಗಿ ಎರಡು-ಬಗೆಯ ದೃಢೀಕರಣವನ್ನುಹೊಂದಿರಬೇಕು ಎಂದು CySecK ಸಲಹೆ ನೀಡುತ್ತದೆ.**

# TOP CYBER NEWS

## MEA e-mail server hacked; sensitive information leaked on dark web

India's Ministry of External Affairs (MEA) has reported a significant cyber-attack on its e-mail server. This is regarded as one of the biggest cyber-attacks in India. The hackers were successful in getting access to the ministry's sensitive data and official communications. The e-mail IDs and passwords of at least 15 senior officials of the ministry have been leaked on Dark-Web.

***CySecK suggests users to be cautious of any suspicious e-mails or messages purporting to be from the MEA and report if faced any such instances to the authorities.***

## Mailchimp suffers social engineering attack; exposes customer data

Mailchimp, a platform for mass e-mail and marketing automation, announced on January 11 that it had been hacked, with bad actors gaining access to information through 133 accounts that were compromised through social engineering. The company stated that the incident exposed customer data, although it did not specify what type of data was compromised.

***CySecK suggests Mailchimp users to keep an eye on their accounts and report any unusual activity.***



## HR portal myrocket.co suffers data breach; millions of Indian employees' personal data leaked

The HR management platform myrocket.co, suffered a major data breach of 260 GB, which exposed the personal information of hundreds of thousands of Indian employees and millions of job seekers. The compromised information included names, phone numbers, e-mail addresses, resumes, pay slips, tax filings, insurance payments, and salary sheets.

***CySecK suggests that registered users of myrocket.co to change their passwords immediately and be wary of phishing e-mails.***



## Government bans 6 YouTube channels for propagating fake news

The Indian government has taken action against six YouTube channels for allegedly spreading fake news. According to a statement from the Press Information Bureau (PIB), the channels were found to share false information about the elections, proceedings in the Supreme Court and Parliament, and the functioning of the government. The action is taken to ensure that the citizens have access to accurate information and to curb the spread of misinformation, which can cause panic and chaos in society.

***CySecK suggests that netizens indulge with content only from verified accounts and never share or forward any information without double-checking the source.***

## Twitter data breach; 200 million user e-mail addresses leaked

According to a researcher, Twitter has suffered a significant hack in which 200 million user e-mail addresses were leaked.

***CySecK suggests Twitter users to change their password and enable two-factor authentication for added security.***

# ಆನ್‌ಲೈನ್ ಮೋಸಗಳು

## ಇನ್ಶೂರೆನ್ಸ್ ಮೋಸದಲ್ಲಿ ₹3.19 ಲಕ್ಷ ಕಳೆದುಕೊಂಡ ಮಹಿಳೆ

ಮಹಿಳೆಗೆ ಕರೆಮಾಡಿದ ಮೋಸಗಾರನು, ಆಕೆಯ ಇನ್ಶೂರೆನ್ಸ್ ಪಾವತಿಯ ದಿನಾಂಕ ಹತ್ತಿರವಾಗಿದೆ ಎಂದು ಹೇಳಿ ಆಕೆಯ ವಿಳಾಸ ಮತ್ತುಸರ್ಕಾರಿ-ನೋಂದಾಯಿತ ಕಾರ್ಡ್ ನಂಬರ್ ವಿವರಗಳನ್ನು ಒದಗಿಸಿ, ಹಂತ ಹಂತವಾಗಿ ಪಾವತಿ ಮಾಡುವಂತೆ ಆಕೆಯ ಮನವೊಲಿಸಿದ. ತಾನುಮೋಸಹೋದೆನೆಂದು ಆ ಮಹಿಳೆಗೆ ಆಮೇಲೆ ಗೊತ್ತಾಗಿ, ಆಕೆ ಸೈಬರ್ ಅಪರಾಧ ಪೊಲೀಸರ ಬಳಿ ದೂರು ದಾಖಲಿಸಿದ್ದಾರೆ.

## ವಿದ್ಯುತ್ ಬಿಲ್ ಮೋಸದಲ್ಲಿ 6 ಮಂದಿಯಿಂದ 5.5 ಲಕ್ಷ ರೂಪಾಯಿ ದೋಚಿದ ಸೈಬರ್ ಅಪರಾಧಿಗಳು

ಪುಣೆಯ ಒಬ್ಬ ವ್ಯಕ್ತಿಗೆ ಒಂದು ಕರೆ ಬಂದಿತು. ಬಿಲ್ ಕಟ್ಟದೆ ಬಾಕಿ ಇರುವುದರಿಂದಾಗಿ ವಿದ್ಯುತ್. ಕಡಿತಗೊಳಿಸುವುದಾಗಿ ಕರೆಮಾಡಿದವನು ಹೇಳಿದ. ಒಂದು ಆಪ್ ಡೌನ್‌ಲೋಡ್ ಮಾಡುವಂತೆ ಕರೆಮಾಡಿದವ ತಿಳಿಸಿದ. ಬಳಿಕ, ಕರೆಮಾಡಿದ ಮೋಸಗಾರನು ಈ ವ್ಯಕ್ತಿಯ ಬ್ಯಾಂಕ್ ಖಾತೆಗಳಿಗೆ ಕನ್ನಹಾಕಿ 1,53,588 ರೂಪಾಯಿ ದೋಚಿದ. ಹಣ ವರ್ಗಾವಣೆಯಾಗಿದೆ ಎಂಬ ಸಂದೇಶಗಳು ಬಂದಾಗ, ಈ ವ್ಯಕ್ತಿಗೆ ತಾನು ಮೋಸಹೋಗಿರುವುದುತಿಳಿಯಿತು. ಇದೇ ಬಗೆಯಲ್ಲಿ ಇನ್ನೂ 5 ಮಂದಿಯಿಂದ 4 ಲಕ್ಷಕ್ಕಿಂತ ಹೆಚ್ಚು ಹಣ ದೋಚಿರುವುದು ವರದಿಯಾಗಿದೆ





## ಕಸ್ಟಮರ್ ಕೇರ್ ಮೋಸದಲ್ಲಿ 56,000 ರೂಪಾಯಿ ಕಳೆದುಕೊಂಡ ಆರೋಗ್ಯ ಹದಗೆಟ್ಟ ಡೆಲಿವರಿ ಕೆಲಸ ಮಾಡುವ ವ್ಯಕ್ತಿ

ಡಾಕ್ಟರ್ ಒಬ್ಬರ ಸಂಪರ್ಕ ವಿವರಗಳನ್ನು ಆನ್‌ಲೈನ್‌ನಲ್ಲಿ ಹುಡುಕುತ್ತಿದ್ದ 32 ರ ಹರೆಯದ ಡೆಲಿವರಿ ಕೆಲಸ ಮಾಡುವ ವ್ಯಕ್ತಿ 56,000 ರೂಪಾಯಿಕಳೆದುಕೊಂಡು ಸೈಬರ್ ಅಪರಾಧಕ್ಕೆ ತುತ್ತಾದರು. ಇವರು ಫೋನಿನಲ್ಲಿ ಮಾತಾಡಿದ ಕಸ್ಟಮರ್ ಕೇರ್ ವ್ಯಕ್ತಿಯು, ಒಂದು ಲಿಂಕ್ ಕ್ಲಿಕ್ ಮಾಡುವಮೂಲಕ 10 ರೂಪಾಯಿ ಕಟ್ಟಿ, ಬ್ಯಾಂಕ್ ವಿವರ ಮತ್ತು ಗೂಗಲ್ ಖಾತೆ ಪಿನ್ ಒದಗಿಸಬೇಕು ಎಂದು ಇವರಿಗೆ ಹೇಳಿದ. ಇವರು ಅದಕ್ಕೆ ಒಪ್ಪಿದರು. ಕೆಲವೇ ನಿಮಿಷಗಳ ಬಳಿಕ, ಅವರ ಖಾತೆಯಿಂದ 56,000 ರೂಪಾಯಿ ಕಳುವಾಯಿತು.

## ಆನ್‌ಲೈನ್ ಮೋಸದಲ್ಲಿ 5 ಲಕ್ಷ ಕಳೆದುಕೊಂಡ 63 ರ ಹರೆಯದ ಡಾಕ್ಟರ್

ಡಾಕ್ಟರ್ ಒಬ್ಬರಿಗೆ ಸಂದೇಶ ಕಳುಹಿಸಿದ ಸೈಬರ್ ಅಪರಾಧಿಗಳು, ಗಡುವು ಮುಗಿದರೂ ಆಕೆ ಇನ್ನೂ ವಿದ್ಯುತ್ ಬಿಲ್ ಕಟ್ಟದೆ ಇರುವುದರಿಂದ ವಿದ್ಯುತ್ ಕಡಿತಗೊಳಿಸುವುದಾಗಿ ಸಂದೇಶದಲ್ಲಿ ಬರೆದಿದ್ದರು. ಕರೆಮಾಡಿದವರ ನಂಬರ್ ನೋಡಿದಾಗ, ಅದು ಟಾಟಾ ಪವರ್ ಹೆಲ್ಪ್‌ಡೆಸ್ಕ್‌ಗೆ ಸೇರಿದ್ದು ಎಂದುಆಕೆಗೆ ತಿಳಿಯಿತು. ಆಕೆಯು ಸಂದೇಶಕ್ಕೆ ಉತ್ತರಿಸಿದಾಗ, ಟಾಟಾ ಪವರ್ ಅಧಿಕಾರಿಯ ಸೋಗಿನಲ್ಲಿದ್ದ ಅಪರಾಧಿಗಳು "ಕ್ವಿಕ್ ಪೇ ಆಪ್"ಡೌನ್‌ಲೋಡ್ ಮಾಡುವಂತೆ ಆಕೆಗೆ ಮರುಳುಮಾಡಿದರು. ಸ್ವಲ್ಪ ಹೊತ್ತಿನ ಬಳಿಕ, ಆಕೆಯ ಫೋನ್ ನಂಬರ್‌ಗೆ ಹೊಂದಿಕೊಂಡಿದ್ದ ಬ್ಯಾಂಕ್ ಖಾತೆಯಿಂದ ದೊಡ್ಡ ಮೊತ್ತದ ಹಣ ದೋಚಿದರು.

## ಕಲಾವಿದರೊಬ್ಬರ ತಂದೆಯಿಂದ 90,000 ರೂಪಾಯಿ ಸುಲಿಗೆ ಮಾಡುವ ಯತ್ನ

76 ರ ಹರೆಯದ ಹಿರಿಯ ವ್ಯಕ್ತಿಯೊಬ್ಬರನ್ನು ಅಪರಾಧಿಗಳು ಗುರಿಯಾಗಿಸಿದರು. ಇವರಿಗೆ ಮೊದಲು ಕರೆಬಂದಾಗ, ಆಕಡೆಯಿಂದ ಮಹಿಳೆಯೊಬ್ಬಳುಸೆಕ್ಸ್ ಕುರಿತು ಮಾತಾಡಿದಳು. ಇವರು ಕರೆ ತುಂಡರಿಸಿದ ಬಳಿಕ, ಆ ಮಹಿಳೆ ಇವರಿಗೆ ಸೆಕ್ಸ್ ವಿಡಿಯೊ ತುಣುಕನ್ನು ಕಳುಹಿಸಿದಳು. ಇವರು ಆ ನಂಬರ್‌ಅನ್ನು ಬ್ಲಾಕ್ ಮಾಡಿದರು. ಆಮೇಲೆ ತಾನು ಪೊಲೀಸ್ ಅಧಿಕಾರಿ ಎಂದು ಹೇಳಿಕೊಂಡು, ಒಬ್ಬ ವ್ಯಕ್ತಿ ಇವರನ್ನು ಸಂಪರ್ಕಿಸಿದ. ಇವರು ಹಣಕೊಡದಿದ್ದರೆ, ಇವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ವಿಡಿಯೊ ಬಯಲುಮಾಡಲಾಗುವುದು ಎಂದು ಪೊಲೀಸ್ ಸೋಗಿನಲ್ಲಿದ್ದಅಪರಾಧಿ ಬೆದರಿಕೆ ಹಾಕಿದ.

## ಆನ್‌ಲೈನ್ ಹೂಡಿಕೆ ಮೋಸದಲ್ಲಿ ಒಟ್ಟು 28 ಲಕ್ಷ ಕಳೆದುಕೊಂಡ ಕರ್ನಾಟಕದ 27 ಮಂದಿ

ಸೈಬರ್ ಅಪರಾಧಿಗಳ ಗುಂಪೊಂದು, ಚಿಕ್ಕಬಳ್ಳಾಪುರದ 27 ಮಂದಿಯನ್ನು ಶೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಂತೆ ಸೆಳೆದು, ಮೂರುತಿಂಗಳಿನಲ್ಲಿ ಅವರಿಂದ ಒಟ್ಟು 28 ಲಕ್ಷ ದೋಚಿರುವ ಘಟನೆ ವರದಿಯಾಗಿದೆ.

## ಫೋನಿನಲ್ಲಿ AnyDesk ಡೌನ್‌ಲೋಡ್ ಮಾಡಿದ ವ್ಯಕ್ತಿ, ನಿಮಿಷಗಳಲ್ಲಿ 5 ಲಕ್ಷ ಕಳೆದುಕೊಂಡ

ತಮ್ಮ ಟೀವಿಯಲ್ಲಿನ ತೊಂದರೆಯನ್ನು ಬಗೆಹರಿಸಲು ಟೀವಿ ಚಾನೆಲ್ ಪೂರೈಕೆದಾರರನ್ನು ಸಂಪರ್ಕಿಸಲು ನೋಡಿದ ವ್ಯಕ್ತಿಯೊಬ್ಬರು ಮೋಸಕ್ಕೆಒಳಗಾಗಿದ್ದಾರೆ. ಇವರು ಫೋನಿನಲ್ಲಿ ಮಾತಾಡುತ್ತಿದ್ದಾಗ, ತಾನು ಚಾನೆಲ್ ಪೂರೈಕೆದಾರರ ತಂಡದವನು ಎಂದು ಹೇಳಿಕೊಂಡು ಇನ್ನೊಬ್ಬ ಇನ್ನೊಂದುನಂಬರ್‌ನಿಂದ ಕರೆಮಾಡಿದ್ದಾನೆ. ಇವರಿಗೆ AnyDesk ಆಪ್ ಡೌನ್‌ಲೋಡ್ ಮಾಡುವಂತೆ ಹೇಳಿದ್ದಾನೆ. ಇವರು ತಮ್ಮ ಫೋನಿನಲ್ಲಿ ಈ ಆಪ್ ಡೌನ್‌ಲೋಡ್ ಮಾಡಿದ ಬಳಿಕ, ತಮ್ಮ ಬ್ಯಾಂಕ್ ಖಾತೆಯಿಂದ 5 ಲಕ್ಷ ಕಾಣೆಯಾಗಿರುವುದು ತಿಳಿದುಬಂದಿದೆ.

# ONLINE FRAUDS

## Woman duped of ₹3.19 lakh in an insurance fraud

The caller informed her that her insurance payment was due and provided details such as her address and government-registered card numbers, convincing her to make payments in a phased manner. The woman later realized she had been duped and filed a complaint with the cybercrime police.

## Cybercriminals defraud 6 in a electricity bill scam of Rs. 5.5 lakh

A man from Pune fell victim to a scam in which he received a call claiming that his power supply would be disconnected for unpaid electricity bills. He was instructed to download an app, and the scammer then accessed his bank accounts and transferred out a total of Rs 1,53,588. The victim became aware of the fraud after receiving text messages confirming the money had been deducted. The same modus operandi was used to dupe five more to over Rs4 lakh.





## Sick delivery man duped of Rs. 56,000 in a customer care fraud

A 32-year-old deliveryman became a victim of cybercrime after losing Rs. 56,000 while searching for a doctor's contact information online. The person he spoke with on the phone asked him to pay of Rs. 10 by clicking on a link and providing his bank details and google account PIN. The victim agreed, and minutes later, Rs. 56,000 was stolen from his account.

## 63-year-old doctor loses Rs. 5 lakh in an online fraud

Cybercriminals targeted a doctor in a scam where she received a message from an unknown number claiming that her power would be disconnected if she did not clear an overdue bill. Upon checking the caller's number, she found that it was the number for the Tata Power helpdesk. When she responded to the message, a person posing as an official from Tata Power tricked her into downloading a fake "Quick Pay app" and subsequently withdrew large sums of money from the bank account linked to her phone number.

## TV actor's father duped of Rs 90,000 in a sextortion case

A 76-year-old man was targeted by scammers where he first received a lewd phone call followed by an obscene video clip from a woman. When the victim blocked the number, he was then contacted by a person impersonating a police officer who threatened him with legal action and warned that the video would be made public unless he paid money to the scammers to prevent it from being leaked online.

## Online investment fraud in Karnataka costs 27 persons a total of Rs. 28 lakh

A group of cybercriminals allegedly defrauded 27 people from the Chikkaballapur area out of Rs 28 lakh over the course of three months by luring them to invest in the stock market.

## Man downloads AnyDesk on phone, loses Rs 5 lakh in minutes

A man was scammed when he attempted to contact his TV channel provider while experiencing issues with his TV. While on the call, he received another call from a person who claimed to be from the channel provider's team and asked him to download the AnyDesk app. After downloading the app on his phone, he discovered that Rs 5 lakh was missing from his bank account.

## Let us understand the value of safeguarding personal data. Let's all pledge to be more mindful of our online security practices.



## Here are five things to do today.

### Check your privacy settings:

Ensure the privacy settings are set to the appropriate level in all your social media accounts, mobile apps, and internet services.

### Create strong and secure passwords:

For increased security, enable two-factor authentication and create strong passwords for each account.

### Be careful what you post:

Refrain from posting sensitive information online, such as your home address, phone number, Identity Cards, or financial data.

### Update your devices:

Maintaining updated software and devices will help you avoid security. Maintaining updated software and devices will help you avoid security flaws.

### Spread awareness:

To spread awareness and aid in protecting everyone's personal information, educate yourself on data privacy, and share what you learn with friends and family.

## ವೈಯಕ್ತಿಕ ಡೇಟಾವನ್ನು ಕಾಪಾಡಿಕೊಳ್ಳುವುದರ ಮಹತ್ವದ ಬಗ್ಗೆ ತಿಳಿದುಕೊಳ್ಳೋಣ. ನಮ್ಮ ಆನ್‌ಲೈನ್ ಸುರಕ್ಷತೆ ಅಭ್ಯಾಸಗಳ ಬಗ್ಗೆ ಹೆಚ್ಚು ಎಚ್ಚರಿಕೆಯಿಂದಿರಲು ನಾವೆಲ್ಲರೂ ಪಣ ತೊಡೋಣ.



## ಈ ಕೆಳಗೆ ಸೂಚಿಸಿರುವ ಐದು ಕೆಲಸಗಳನ್ನು ಇಂದೇ ಮಾಡಿ ಅಂರ್ಜಾಲ ಜಗತ್ತಿನಲ್ಲಿ ಸುಕ್ಷಿತರಾಗಿರಿ

### ಸೆಟ್ಟಿಂಗ್‌ಗಳನ್ನು ಇಂದೇ ಪರಿಶೀಲಿಸಿ:

ನಿಮ್ಮ ಎಲ್ಲ ಸಾಮಾಜಿಕ ಜಾಲತಾಣ ಖಾತೆಗಳು, ಮೊಬೈಲ್ ಆಪ್‌ಗಳು ಮತ್ತು ಇಂಟರ್‌ನೆಟ್ ಸೇವೆಗಳಲ್ಲಿ ಗೌಪ್ಯತೆ ಸೆಟಿಂಗ್‌ಗಳು ಸರಿಯಾದ ಮಟ್ಟದಲ್ಲಿರುವಂತೆ ನೋಡಿಕೊಳ್ಳಿ.

### ಬಲವಾದ ಮತ್ತು ಭದ್ರವಾದ ಪಾಸ್‌ವರ್ಡ್‌ಗಳನ್ನು ಇರಿಸಿ:

ಹೆಚ್ಚಿನ ಸುರಕ್ಷತೆಗಾಗಿ, ಎರಡು-ಬಗೆಯ ದೃಢೀಕರಣವನ್ನು ಸಕ್ರಿಯಗೊಳಿಸಿಮತ್ತು ಪ್ರತಿಯೊಂದು ಖಾತೆಗೂ ಸುಲಭವಾಗಿ ಊಹಿಸಲಾಗದ ಪಾಸ್‌ವರ್ಡ್‌ಗಳನ್ನು ಇರಿಸಿ.

### ನಿಮ್ಮ ಆನ್‌ಲೈನ್ ಪೋಸ್ಟ್‌ಗಳ ಬಗ್ಗೆ ಎಚ್ಚರವಿರಲಿ:

ನಿಮ್ಮ ಮನೆ ವಿಳಾಸ, ಫೋನ್ ನಂಬರ್, ಐಡೆಂಟಿಟಿ ಕಾರ್ಡ್ ವಿವರ ಇಲ್ಲವೇಹಣಕಾಸಿನ ಡೇಟಾದಂತಹ ಸೂಕ್ಷ್ಮ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡದಿರಿ.

### ನಿಮ್ಮ ಡಿವೈಸ್‌ಗಳನ್ನು ಅಪ್‌ಡೇಟ್ ಮಾಡಿ:

ಅಪ್‌ಡೇಟ್ ಮಾಡಿದ ಸಾಫ್ಟ್‌ವೇರ್ ಮತ್ತು ಡಿವೈಸ್‌ಗಳನ್ನು ಬಳಸಿದರೆ, ಭದ್ರತೆಯದೋಷಗಳ ಅಪಾಯಗಳಿಂದ ತಪ್ಪಿಸಿಕೊಳ್ಳಬಹುದು.

### ಈ ಬಗ್ಗೆ ಇತರರಿಗೂ ಜಾಗೃತಿ ಮೂಡಿಸಿ:

ತಿಳಿವನ್ನು ಪಸರಿಸಲು ಮತ್ತು ಎಲ್ಲರ ವೈಯಕ್ತಿಕ ಮಾಹಿತಿ ಕಾಪಾಡುವಲ್ಲಿ ನೆರವಾಗಲು, ಡೇಟಾಗೌಪ್ಯತೆಯ ಬಗ್ಗೆ ನೀವು ಅರಿವನ್ನು ಪಡೆಯಿರಿ ಮತ್ತು ನೀವು ಕಲಿತದ್ದನ್ನು ನಿಮ್ಮ ಗೆಳೆಯರು ಮತ್ತು ಕುಟುಂಬದವರೊಡನೆ ಹಂಚಿಕೊಳ್ಳಿ.

# ಸೈಸೆಕ್ ವರದಿ | CYSECK UPDATES

13th January 2023
13ನೇ ಜನವರಿ 2023



- The cybersecurity awareness session was conducted by CySecK's volunteer- Sacumen, who shared valuable information and insights on how to protect oneself from cyber threats and attacks. The session was conducted at KSIT college, Bengaluru, and was a huge success, with over 120 computer science students in attendance.
- CySecK ನ ಪಾಲುದಾರ ಸಂಸ್ಥೆಯಾದ Sacumen, ಸೈಬರ್‌ಸುರಕ್ಷತೆ ತಿಳಿವು ಸೆಶನ್ ನಡೆಸಿಕೊಟ್ಟಿತು. ಸೈಬರ್ ದಾಳಿಗಳಿಂದ ನಮ್ಮನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದರ ಬಗ್ಗೆ ಅತ್ಯಮೂಲ್ಯ ಮಾಹಿತಿ ಮತ್ತು ಒಳನೋಟಗಳನ್ನು ಇದರಲ್ಲಿ ಹಂಚಲಾಯಿತು. ಬೆಂಗಳೂರಿನ ಕೆಎಸ್‌ಐಟಿ ಕಾಲೇಜಿನಲ್ಲಿ ಈ ಸೆಶನ್ ಹಮ್ಮಿಕೊಳ್ಳಲಾಗಿತ್ತು. 120 ಕ್ಕೂ ಹೆಚ್ಚು ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಳ್ಳುವ ಮೂಲಕ, ಇದು ದೊಡ್ಡ ಗೆಲುವನ್ನು ಕಂಡಿತು.

21st January 2023
21ನೇ ಜನವರಿ 2023

- CySecK announced its winners for H.A.C.K Proof- The Pitch Competition 2022.
- H.A.C.K Proof- The Pitch Competition 2022 ರಲ್ಲಿ ಗೆದ್ದವರ ಹೆಸರುಗಳನ್ನು CySecK ಸಾರಿತು



• Samgacchadhwam series of webinars- a free webinar conducted by CySecK for students/ faculty/ working professionals
• ಸಂಗಚದ್ವಮ್ ಸರಣಿಯ ವೆಬಿನಾರ್‌ಗಳು – ವಿದ್ಯಾರ್ಥಿ/ಶಿಕ್ಷಕ ವರ್ಗ/ಕೆಲಸದಲ್ಲಿರುವ ವೃತ್ತಿಪರರಿಗೆ CySecK ನಡೆಸಿಕೊಡುತ್ತಿರುವ ಉಚಿತ ವೆಬಿನಾರ್

**#51**
**Topic:** Cloud Security: A Penetration Testing Perspective
**Speaker:** Mr. Raghotham Mruthike, Desk Nine Pvt. Ltd
**Link:** https://www.youtube.com/watch?v=1ZNFieBSWcc

**ವಿಷಯ:** ಕ್ಲೌಡ್ ಸೆಕ್ಯೂರಿಟಿ: ಎ ಪೆನಿಟ್ರೇಶನ್ ಟೆಸ್ಟಿಂಗ್ ಪರ್ಸ್‌ಪೆಕ್ಟಿವ್
**ಮಾತುಗಾರರು:** ಶ್ರೀ. ರಘೋತ್ತಮ್ ಮೃತಿಕೆ, ಡೆಸ್ಕ್ ನೈನ್ ಪ್ರೈವೇಟ್ ಲಿಮಿಟೆಡ್
**ಲಿಂಕ್:** https://www.youtube.com/watch?v=1ZNFieBSWcc

**#52**
**Topic:** System Security - Part 1
**Speaker: Mr. Jason Joseph, SignDesk**
**Link:** https://www.youtube.com/watch?v=2qyHq3y3rxQ

**ವಿಷಯ:** ಸಿಸ್ಟಮ್ ಸೆಕ್ಯೂರಿಟಿ – ಭಾಗ 1
**ಮಾತುಗಾರರು:** ಶ್ರೀ. ಜೇಸನ್ ಜೋಸೆಫ್, ಸೈನ್‌ಡೆಸ್ಕ್
**ಲಿಂಕ್:** https://www.youtube.com/watch?v=2qyHq3y3rxQ

**#53**
**Topic:** System Security - Part 2
**Speaker: Mr. Vijay Nagaraj, Secure Code Warrior**
**Link:** https://www.youtube.com/watch?v=rLLoUQE1nSw

**ವಿಷಯ:** ಸಿಸ್ಟಮ್ ಸೆಕ್ಯೂರಿಟಿ – ಭಾಗ 2
**ಮಾತುಗಾರರು:** ಶ್ರೀ. ವಿಜಯ್ ನಾಗರಾಜ್, ಸೆಕ್ಯೂರ್ ಕೋಡ್ ವಾರಿಯರ್
**ಲಿಂಕ್:** https://www.youtube.com/watch?v=rLLoUQE1nSw

# ಉಪಯುಕ್ತ ಲಿಂಕ್‌ಗಳು | USEFUL LINKS

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು **cybercrime.gov.in**
- ತಪ್ಪು ಮಾಹಿತಿ ಗುರುತಿಸಲು - **https://factcheck.ksp.gov.in**
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**



# ನಮ್ಮ ಬಗ್ಗೆ | ABOUT CYSECK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.